# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 473 |
| ಮಾನ್ಯ ಸದಸ್ಯರ ಹೆಸರು | ಶ್ರೀ ಎಸ್.ರವಿಕುಮಾರ್ |
| ಉತ್ತರಿಸುವ ಸಚಿವರು | ಉನ್ನತ ಶಿಕ್ಷಣ ಸಚಿವರು |
| ಉತ್ತರಿಸಬೇಕಾದ ದಿನಾಂಕ | 13-12-2018 |
| ಪ್ರಶ್ನೆ | ಉತ್ತರ |
| (ಅ) ಕಾಲೇಜು ಶಿಕ್ಷಣ ಇಲಾಖೆಯು ಪ್ರಾಧ್ಯಾಪಕರಿಗೆ 12 ವರ್ಷಗಳಿಂದ ಬಾಕಿ ವೇತನ ಪಾವತಿ ಮಾಡದೆ ಉಪನ್ಯಾಸಕರಿಗೆ ಅನ್ಯಾಯವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: | ಬಂದಿದೆ.<br><br>2006ರ ಪರಿಷ್ಕೃತ ಯುಜಿಸಿ ಬಾಕಿ ಮತ್ತು ಎಂಫಿಲ್/ಪಿಎಚ್‌ಡಿ ಮುಂಗಡ ವೇತನ ಬಡ್ತಿ ಹೊರತು ಪಡಿಸಿ ಇತರೆ ಯಾವುದೇ ವಿಧದ ಬಾಕಿಗಳು 12 ವರ್ಷಗಳಿಂದ ಪಾವತಿಯಾಗದೇ ಬಾಕಿ ಉಳಿದಿರುವುದಿಲ್ಲ. |
| (ಆ)ಪ್ರಾಧ್ಯಾಪಕರಿಗೆ ಬಾಕಿ ವೇತನ ಪಾವತಿ ಮಾಡಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ; ವೇತನ ಬಾಕಿ ಪಾವತಿಗೆ 12 ವರ್ಷಗಳ ವಿಳಂಬವಾಗಲು ಕಾರಣವೇನು; ಸದರಿ ಸೌಲಭ್ಯಗಳನ್ನು ನೀಡುವಲ್ಲಿ ಸರ್ಕಾರವು ವಿಳಂಬ ನೀತಿ ಅನುಸರಿದಂತಾಗಲಿಲ್ಲವೆ; | ಯುಜಿಸಿ/ಎಐಸಿಟಿಇಯ ಪರಿಷ್ಕೃತ 6ನೇ ವೇತನದಿಂದ ಉಂಟಾಗುವ ಯುಜಿಸಿಯ ಬೇಬಾಕಿಯನ್ನು ರಾಜ್ಯದ ಸರ್ಕಾರಿ ಮತ್ತು ಅನುದಾನಿತ ಕಾಲೇಜುಗಳು ಮತ್ತು ವಿಶ್ವವಿದ್ಯಾಲಯಗಳ ಸಿಬ್ಬಂದಿಗಳಿಗೆ ರೂ. 1086.00ಕೋಟಿ ಗಳನ್ನು ಇದುವರೆವಿಗೂ ಬಿಡುಗಡೆ ಮಾಡಲಾಗಿದ್ದು, ಅಂದಾಜು. ರೂ. 179.05 ಕೋಟಿಗಳನ್ನು ಬಿಡುಗಡೆ ಮಾಡಬೇಕಾಗಿರುತ್ತದೆ.<br><br>ಯು.ಜಿ.ಸಿ. ಬಾಕಿ ವೇತನವು ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರವು 80:20 ಅನುಪಾತದಲ್ಲಿ ಭರಿಸಬೇಕಾಗುತ್ತದೆ. ರಾಜ್ಯ ಸರ್ಕಾರವು ಬಿಡುಗಡೆ ಮಾಡಿರುವ ಬೇಬಾಕಿ ಮೊತ್ತವನ್ನು ಮರು ಪಾವತಿಸುವಂತೆ ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿದ್ದು, ಕೇಂದ್ರ ಸರ್ಕಾರದಿಂದ ಮರುಪಾವತಿಯಾದ ನಂತರ ಅರ್ಹ ಸಿಬ್ಬಂದಿಗಳಿಗೆ ಬಾಕಿ ಮೊತ್ತವನ್ನು ಬಿಡುಗಡೆ ಮಾಡಲಾಗುವುದು.<br><br>ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಿಗೆ ಸಂಬಂಧಿಸಿದಂತೆ ಆಯಾ ಕಾಲೇಜಿನ ಪ್ರಾಂಶುಪಾಲರ ಹಂತದಲ್ಲಿಯೇ ಬಾಕಿ ವೇತನವನ್ನು ಕ್ಲೇಮು ಮಾಡಲಾಗುತ್ತಿದೆ. ಖಾಸಗಿ ಅನುದಾನಿತ ಪದವಿ ಕಾಲೇಜುಗಳಿಗೆ ಸಂಬಂಧಿಸಿದಂತೆ, ವೇತನ ಬಾಕಿಯು ಪ್ರಾದೇಶಿಕ ಜಂಟಿ ನಿರ್ದೇಶಕರಿಂದ ಅನುಮೋದನೆಗೊಂಡ ನಂತರ ಸಂಬಂಧಪಟ್ಟ ಕಾಲೇಜುಗಳು ಆಯಾ ಪ್ರಾದೇಶಿಕ ಜಂಟಿ ನಿರ್ದೇಶಕರಿಗೆ ಅನುದಾನವನ್ನು ಕೋರಿ ಸಲ್ಲಿಸಲಾದ ಪ್ರಸ್ತಾವನೆಗಳನ್ನು ಕ್ರೋಡೀಕರಿಸಿ ಕೇಂದ್ರ ಕಛೇರಿಗೆ ಅನುದಾನ ಬಿಡುಗಡೆಗೆ ಸಲ್ಲಿಸಿದ ನಂತರ ಕಾಲೇಜು ಶಿಕ್ಷಣ ಇಲಾಖೆಯಿಂದ ಪರಿಶೀಲಿಸಿ ಸರ್ಕಾರದಿಂದ ಒದಗಿಸಿರುವ ಅನುದಾನದ ಲಭ್ಯತೆಯನ್ನಾಧರಿಸಿ ಬಾಕಿ ಪಾವತಿಗೆ ಅನುದಾನವನ್ನು ಆಯಾ ಪ್ರಾದೇಶಿಕ ಜಂಟಿ ನಿರ್ದೇಶಕರುಗಳಿಗೆ ಬಿಡುಗಡೆ ಮಾಡಲಾಗುತ್ತಿದೆ. |

| | |
|---|---|
| | ಖಾಸಗಿ ಅನುದಾನಿತ ಕಾಲೇಜುಗಳ ಬಾಕಿ ವೇತನ ಪಾವತಿಗಾಗಿ ಕಳೆದ ಮೂರು ಸಾಲುಗಳಲ್ಲಿ ಕಾಲೇಜು ಶಿಕ್ಷಣ ಇಲಾಖೆಯಿಂದ ರೂ. 22,24,35,862ಗಳ ಅನುದಾನವನ್ನು ಹಾಗೂ ಕಾಲೇಜುಗಳಲ್ಲಿನ ಜಂಟಿ ಖಾತೆಯಿಂದ ರೂ. 7,67,71,364ಗಳನ್ನು ಒಟ್ಟಾರೆಯಾಗಿ ರೂ. 29,92,07,226ಗಳ ಬಾಕಿ ವೇತನ ಪಾವತಿಗೆ ಕ್ರಮವಹಿಸಲಾಗಿದೆ.<br><br>ಸರ್ಕಾರದ ಪತ್ರ ಸಂಖ್ಯೆ:ಇಡಿ:95:ಡಿಸಿಇ:2014 ದಿನಾಂಕ:28.04.2017ರಲ್ಲಿ ಎಂ.ಫಿಲ್/ಪಿಎಚ್‌ಡಿ ಮುಂಗಡ ವೇತನ ಬಡ್ತಿಗೆ ಸಂಬಂಧಿಸಿದಂತೆ ಮಾರ್ಗದರ್ಶನವನ್ನು ನೀಡಲಾಗಿರುತ್ತದೆ. ಆದರೆ ಸರ್ಕಾರದ ದಿನಾಂಕ:28.04.2017ರ ಪತ್ರದಲ್ಲಿ ನೀಡಿದ ಸೂಚನೆಯಂತೆ ಮುಂಗಡ ವೇತನ ಬಡ್ತಿಗಳನ್ನು ಮಂಜೂರು ಮಾಡುವ ಸಂಬಂಧ ಮಹಾಲೇಖಪಾಲರ ಕಛೇರಿಯ ದಿನಾಂಕ:24.05.2017ರ ಪತ್ರದಲ್ಲಿ ಕೆಲವು ಸ್ಪಷ್ಟೀಕರಣಗಳಿಗೆ ಸಂಬಂಧಿಸದಂತೆ ಸರ್ಕಾರವನ್ನು ಕೋರಿದ್ದು, ಈ ಕುರಿತು ಸರ್ಕಾರದಿಂದ ಸ್ಪಷ್ಟೀಕರಣ ನೀಡುವ ಬಗ್ಗೆ ಪರಿಶೀಲಿಸಲಾಗುತ್ತಿದೆ.<br><br>ಸ್ಥಾನೀಕರಣ ಬಾಕಿಗಳಿಗೆ ಸಂಬಂಧಿಸಿದಂತೆ, ನಿಗಧಿಪಡಿಸಿರುವ ರೆಫ್ರೆಶರ್ ಮತ್ತು ಓರಿಯಂಟೇಶನ್ ಕೋರ್ಸುಗಳನ್ನು ನಿಗಧಿತ ಅವಧಿಯಲ್ಲಿ ಪೂರ್ಣಗೊಳಿಸಿಲ್ಲದಂತಹ ಪ್ರಕರಣಗಳಲ್ಲಿ ಸದರಿ ಕೋರ್ಸುಗಳನ್ನು ಪೂರ್ಣಗೊಳಿಸಿದ ನಂತರ ಅರ್ಹ ದಿನಾಂಕಕ್ಕೆ ಸ್ಥಾನೀಕರಣವನ್ನು ನೀಡಿ ವೇತನವನ್ನು ಕಾಲ್ಪನಿಕವಾಗಿ ನಿಗಧಿಪಡಿಸಿ ಕೋರ್ಸು ಪೂರ್ಣಗೊಳಿಸಿದ ದಿನಾಂಕದಿಂದ ಆರ್ಥಿಕ ಸೌಲಭ್ಯವನ್ನು ನೀಡಲು ಅನುಮತಿಯನ್ನು ನೀಡಲಾಗುತ್ತಿದೆ. ಇಂತಹ ಪ್ರಕರಣಗಳಲ್ಲಿ ಮಾತ್ರ ವಿಳಂಬವಾಗುತ್ತಿದೆ. |
| (ಇ) ಕಾಲೇಜು ಶಿಕ್ಷಣ ಇಲಾಖೆಯಲ್ಲಿ 5 ವರ್ಷಕ್ಕಿಂತ ಹಳೆಯ ಬಾಕಿ ಕಡತಗಳ ಸಂಖ್ಯೆ ಎಷ್ಟು, ಯಾವ ಕಾರಣಗಳಿಗಾಗಿ ಬಾಕಿ ಉಳಿದೆ. | ಕಾಲೇಜು ಶಿಕ್ಷಣ ಇಲಾಖೆಯಲ್ಲಿ 5 ವರ್ಷಗಳಿಂದ 175 ಕಡತಗಳು ಬಾಕಿ ಉಳಿದಿದ್ದು, 5 ವರ್ಷಗಳಿಂದ ಬಾಕಿ ಉಳಿದಿರುವ ಕಡತಗಳ ಪಟ್ಟಿಯನ್ನು ಸಿದ್ಧಪಡಿಸಿ ಯಾವ ಕಾರಣದಿಂದಾಗಿ ಬಾಕಿ ಉಳಿದಿದೆ ಎಂಬ ಮಾಹಿತಿಯೊಂದಿಗೆ ಪಟ್ಟಿಯನ್ನು ಅನುಬಂಧ- ಅ ರಲ್ಲಿ ಒದಗಿಸಿದೆ. |

**ಸಂಖ್ಯೆ: ಇಡಿ 416 ಯುಎನ್‌ಇ 2018**

(ಜಿ.ಟಿ. ದೇವೇಗೌಡ)
ಉನ್ನತ ಶಿಕ್ಷಣ ಸಚಿವರು.

ಅನುಬಂಧ - 6

## ಕಾಲೇಜು ಶಿಕ್ಷಣ ಇಲಾಖೆಯಲ್ಲಿ ೦೫ ವರ್ಷಕ್ಕಿಂತ ಹಳೆಯ ಬಾಕಿ ಕಡತಗಳ ವಿವರ

| ಕ್ರ.ಸಂ. | ವಿಷಯ | ಕಡತ ಸಂಖ್ಯೆ | ಬಾಕಿ ಉಳಿಯಲು ಕಾರಣ |
|---|---|---|---|
| 1 | ನ್ಯಾಯಾಲಯ ಪ್ರಕರಣಗಳಿಗೆ ಸಂಬಂಧಿಸಿದಂತೆ | 133 | ರಾಜ್ಯ ಉಚ್ಛ ನ್ಯಾಯಾಲಯ, ಕರ್ನಾಟಕ ಆಡಳಿತ ನ್ಯಾಯ ಮಂಡಳಿ, ಸರ್ವೋಚ್ಛ ನ್ಯಾಯಾಲಯ ಹಾಗೂ ಇತರೆ ನ್ಯಾಯಾಲಯಗಳಲ್ಲಿ ದಾಖಲಾಗುವ ಪ್ರಕರಣಗಳಿಗೆ ಸಂಬಂಧಿಸಿದಂತೆ ಪ್ರತ್ಯೇಕ ಕಡತಗಳನ್ನು ತೆರೆಯಲಾಗುತ್ತಿದ್ದು ಈ ಹಿನ್ನೆಲೆಯಲ್ಲಿ 131 ಪ್ರಕರಣಗಳು ವಿವಿಧ ನ್ಯಾಯಾಲಯಗಳಲ್ಲಿ ಇತ್ಯರ್ಥವಾಗದೆ ಇರುವುದರಿಂದ ಸದರಿ ಕಡತಗಳು ಬಾಕಿ ಉಳಿದಿರುತ್ತವೆ. |
| 2 | ಪಿಂಚಣಿ ವಿಷಯಗಳಿಗೆ ಸಂಬಂಧಿಸಿದಂತೆ | 10 | 1) **ಕಾಶಿಇ/62/ಪಿಂಚಣಿ/ಸಿಆರ್1/2012-13**<br><br>ಶ್ರೀ ಬಸವರಾಜ.ಐ, ನಿವೃತ್ತ ಗ್ರೇಡ್ – 1 ಪ್ರಾಂಶುಪಾಲರು, ಸಪ್ರದಕಾ, ಹರಪನಹಳ್ಳಿ, ಇವರಿಗೆ ಪ್ರಾವಿಷನಲ್ ಪಿಂಚಣಿ ಮಂಜೂರಾಗಿದ್ದು, ಸದರಿಯವರು ಕಲಬುರಗಿ ವಿಶ್ವವಿದ್ಯಾಲಯದಲ್ಲಿ 2005 ರಲ್ಲಿ ನಡೆದ ಪ್ರಶ್ನೆ ಪತ್ರಿಕೆಗಳ ಕಳುವು ಪ್ರಕರಣದಲ್ಲಿ ಸದರಿಯವರನ್ನು ದೋಷ ಮುಕ್ತರನ್ನಾಗಿ ಪರಿಗಣಿಸುವ ಸಂಬಂಧ ಪ್ರಕರಣ ಇತ್ಯರ್ಥವಾಗಿರುವುದಿಲ್ಲ. ಆದ್ದರಿಂದ ಬಾಕಿ ಉಳಿದಿದೆ.<br><br>2) **ಕಾಶಿಇ/447/ಪಿಂಚಣಿ/ಸ್ವನಿ/2002-03**<br>ಶ್ರೀ ಬಿ.ನಾರಾಯಣಸ್ವಾಮಿ, ನಿವೃತ್ತ ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಪ್ರಾದೇಶಿಕ ಕಛೇರಿ, ದಾರವಾಡ, ಇವರಿಗೆ ವಿಳಂಬವಾಗಿ ಪಾವತಿಸಿದ ನಿವೃತ್ತಿ ಉಪದಾನ ಹಾಗೂ ಗಳಿಕೆ ರಜೆ ನಗದೀಕರಣದ ಮೊತ್ತಕ್ಕೆ ನಿವೃತ್ತಿ ಹೊಂದಿದ 04ನೇ ತಿಂಗಳ ಪ್ರಾರಂಭದಿಂದ ಶೇ.8 ರ ಬಡ್ಡಿ ದರದಲ್ಲಿ ಬಡ್ಡಿ ಲೆಕ್ಕಾಚಾರ ಮಾಡಿ, ಒಟ್ಟು ರೂ.1,95,845/-ಗಳಿಗೆ ಅನುಮೋದನೆ ನೀಡುವ ಸಂಬಂಧ ಸರ್ಕಾರಕ್ಕೆ ಪತ್ರ ಬರೆಯಲಾಗಿರುತ್ತದೆ. ಸರ್ಕಾರದ ಆದೇಶದ ನಂತರ ಕ್ರಮಕೈಗೊಳ್ಳಲಾಗುವುದು.<br>3) **ಕಾಶಿಇ/406/ತ್ರಿಸೌಯೋ/2003-04**<br><br>ಶ್ರೀ ಜಿ.ವಿ.ಉಮತಾರ, ನಿವೃತ್ತ ಗ್ರಂಥಪಾಲಕರು, ಸಿ.ಎಸ್. ಬೆಂಬಳಗಿ ಕಲಾ ಮತ್ತು ವಾಣಿಜ್ಯ ಕಾಲೇಜು, ರಾಮದುರ್ಗ, ಇವರಿಗೆ ನ್ಯಾಯಾಲಯದ ಆದೇಶದಂತೆ ಸದರಿಯವರಿಗೆ ದಿನಾಂಕ:01-01-1996 ರಿಂದ ಆಯ್ಕೆ ವೇತನ ಶ್ರೇಣಿಯಲ್ಲಿ ರೂ.14,940/-ರ ಮೂಲ ವೇತನ ಸೌಲಭ್ಯವನ್ನು ವಿಸ್ತರಿಸಿ ಸದರಿ ನಿವೃತ್ತರಿಂದ ವಸೂಲು ಮಾಡಲಾದ ಮೊತ್ತ ರೂ.54,360/-ಗಳಿಗೆ ವಸೂಲಾತಿ ದಿನಾಂಕದಿಂದ ಶೇ.9ರ ದರದಲ್ಲಿ ಬಡ್ಡಿಯನ್ನು ಪಾವತಿಸಲು ನ್ಯಾಯಾಲಯದಿಂದ ಆದೇಶಿಸಲಾಗಿದೆ. ಸದರಿ ಆದೇಶದಂತೆ ಬಡ್ಡಿ ಮೊತ್ತ ಒಟ್ಟು ರೂ.67,732/-ಗಳಿಗೆ ಅನುಮೋದನೆ ನೀಡುವ ಸಂಬಂಧ ಸರ್ಕಾರಕ್ಕೆ ಪತ್ರ ಬರೆಯಲಾಗಿರುತ್ತದೆ. ಸರ್ಕಾರದ ಆದೇಶದ ನಂತರ ಕ್ರಮಕೈಗೊಳ್ಳಲಾಗುವುದು.<br><br>4) **ಕಾಶಿಇ/05/ತ್ರಿಸೌಯೋ/ಉ.ಕ/2010-11**<br><br>ದಿವಂಗತ ಡಾ॥ ಎಂ.ಗೋವಿಂದಸ್ವಾಮಿ, ನಿವೃತ್ತ ಭೂಗರ್ಭಶಾಸ್ತ್ರ ಉಪನ್ಯಾಸಕರು, ಇವರು ಶಿರಸಿ, ಎಂ.ಎಂ.ಕಲಾ ಮತ್ತು ವಿಜ್ಞಾನ ಕಾಲೇಜಿನಿಂದ ಸರ್ಕಾರಿ ವಿಜ್ಞಾನ ಕಾಲೇಜು, ತುಮಕೂರು, ಇಲ್ಲಿಗೆ ನಿಯೋಜನೆ ಹೊಂದಿ ನಂತರ ಎಂ.ಎಂ. ಕಲಾ ಮತ್ತು ವಿಜ್ಞಾನ ಕಾಲೇಜು, ಶಿರಸಿ, ಇಲ್ಲಿಗೆ ವರದಿ ಮಾಡಿಕೊಳ್ಳದೇ ದಿನಾಂಕ:06-03-2009ರಂದು ನೇರವಾಗಿ ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ಇಲ್ಲಿ ಪ್ರವಾಚಕರಾಗಿ ಕರ್ತವ್ಯಕ್ಕೆ ವರದಿ ಮಾಡಿಕೊಂಡಿದ್ದು, ದಿನಾಂಕ:04-02-2010ರಂದು ನಿಧನ ಹೊಂದಿರುತ್ತಾರೆ. ಸದರಿಯವರ ಕುಟುಂಬ ಪಿಂಚಣಿ ಸಂಬಂಧ ದಿವಂಗತರ |

| | | | |
|---|---|---|---|
| | | | ಇಬ್ಬರು ಪತ್ನಿಯರಿಂದ ಕುಟುಂಬ ಪಿಂಚಣಿಗೆ ಮನವಿ ಸ್ವೀಕೃತವಾಗಿದ್ದು, ಇಬ್ಬರು ಪತ್ನಿಯರಲ್ಲಿ ಯಾರು ಮೊದಲನೇ ಪತ್ನಿ ಎಂಬುದರ ಬಗ್ಗೆ ಹಾಗೂ ಯಾರಿಗೆ ಕುಟುಂಬ ಪಿಂಚಣಿ ಮಂಜೂರು ಮಾಡಬೇಕೆಂಬುದರ ಬಗ್ಗೆ ಕೂಲಂಕುಷವಾಗಿ ಪರಿಶೀಲಿಸಿ, ವರದಿಯನ್ನು ಸ್ಪಷ್ಟ ಅಭಿಪ್ರಾಯದೊಂದಿಗೆ ಪ್ರಸ್ತಾವನೆಯನ್ನು ಸಲ್ಲಿಸಲು ಧಾರವಾಡ, ಪ್ರಾದೇಶಿಕ ಜಂಟಿ ನಿರ್ದೇಶಕರಿಗೆ ಸೂಚಿಸಲಾಗಿದ್ದು, ವರದಿ ಬಂದ ಕೂಡಲೇ ಸರ್ಕಾರದಿಂದ ಅನುಮೋದನೆ ಪಡೆದು ಕ್ರಮಕೈಗೊಳ್ಳಲಾಗುವುದು.<br><br>**5) ಕಾಶಿಇ/124/ಸಿಆರ್3/ತ್ರಿಸೌಯೋ/2013-14**<br><br>ದಿವಂಗತ ಎಸ್.ಸಿ.ಮಾಚಿಗೌಡರ್, ನಿವೃತ್ತ ಕನ್ನಡ ಉಪನ್ಯಾಸಕರು, ಬಿ.ಇ.ಸಿ. ಕಾಲೇಜು, ಕುಂದಗೋಳ, ಇವರು ದಿನಾಂಕ:20-04-2011ರಂದು ಮರಣ ಹೊಂದಿದ್ದು, ದಿವಂಗತರು ದಿನಾಂಕ:16-12-2002ರಿಂದ ಅನಧಿಕೃತ ಗೈರು ಹಾಜರಿಯಾದ ಪ್ರಯುಕ್ತ ದಿನಾಂಕ:31-03-2004ಕ್ಕೆ ಆಡಳಿತ ಮಂಡಳಿಯ ಠರಾವಿನ ರೀತ್ಯಾ ಆಡಳಿತ ಮಂಡಳಿಯು ಸದರಿಯವರನ್ನು ಸೇವೆಯಿಂದ ವಜಾಗೊಳಿಸಲಾಗಿರುತ್ತದೆ. ಈ ಹಿನ್ನೆಲೆಯಲ್ಲಿ ದಿವಂಗತರ ಕುಟುಂಬ ಪಿಂಚಣಿ ಮಂಜೂರಾತಿಗೆ ಸಂಬಂಧಿಸಿದಂತೆ ಅಗತ್ಯ ಮಾಹಿತಿ/ ದಾಖಲಾತಿಗಳನ್ನು ಸಲ್ಲಿಸಲು ಧಾರವಾಡ, ಪ್ರಾದೇಶಿಕ ಜಂಟಿ ನಿರ್ದೇಶಕರಿಗೆ ಪತ್ರ ಹಾಗೂ ನೆನಪೋಲೆ ಮೂಲಕ ಸೂಚಿಸಲಾಗಿರುತ್ತದೆ. ಪ್ರಾದೇಶಿಕ ಜಂಟಿ ನಿರ್ದೇಶಕರಿಂದ ವರದಿ ಬಂದ ನಂತರ ಅಗತ್ಯ ಕ್ರಮಕೈಗೊಳ್ಳಲಾಗುವುದು. |
| 3 | ಸೇವಾ ವಿಷಯಗಳಿಗೆ ಸಂಬಂಧಿಸಿದಂತೆ | 2 | 1. **ಕಡತ ಸಂ. ಕಾಶಿಇ/227/ಪಸೇಅ/12-13/ಸೇವಿ-2**<br><br>ಶ್ರೀಮತಿ ರಜೀಯಾ ಸುಲ್ತಾನ, ಆಂಗ್ಲಭಾಷ ಸಹಾಯಕ ಪ್ರಾಧ್ಯಾಪಕರು, ಸರ್ಕಾರಿ ಮಹಿಳಾ ಕಾಲೇಜು, ಮಂಡ್ಯ ಇವರ ಪರೀಕ್ಷಾರ್ಥ ಸೇವಾವಧಿ ಘೋಷಿಸುವ ಸಂಬಂಧ 2012-13ನೇ ಸಾಲಿನಲ್ಲಿ ಪ್ರಾರಂಭವಾಗಿದ್ದು, ಸದರಿಯವರ ವೇತನ ರಹಿತ ರಜೆ ಮಂಜೂರಾತಿ ಸಂಬಂಧ ಕ್ರಮ ಬಾಕಿ ಇದ್ದು ಪರಿಶೀಲನಾ ಹಂತದಲ್ಲಿರುವುದರಿಂದ ಕಡತ ಬಾಕಿ ಇದೆ.<br><br>2. **ಕಡತ ಸಂ. ಕಾಶಿಇ/482/ಸೇಜೂಅ/2010/ಸೇವಿ-2**<br><br>ಶ್ರೀ ಮಹೇಶ್ ಎಲ್, ವಾಣಿಜ್ಯಶಾಸ್ತ್ರ ಸಹಾಯಕ ಪ್ರಾಧ್ಯಾಪಕರು ಇವರ ಪರೀಕ್ಷಾರ್ಥ ಸೇವಾವಧಿ ಘೋಷಿಸುವ ಸಂಬಂಧ 2012-13ನೇ ಸಾಲಿನಲ್ಲಿ ಪ್ರಾರಂಭವಾಗಿದ್ದು, ಕರ್ನಾಟಕ ಆಡಳಿತ ನ್ಯಾಯ ಮಂಡಳಿಯ ತೀರ್ಪಿನನ್ವಯ ಕ್ರಮಕೈಗೊಳ್ಳಲು ಸರ್ಕಾರದ ಮಾರ್ಗದರ್ಶನವನ್ನು ಈ ಕಛೇರಿ ಪತ್ರ ಸಂಖ್ಯೆ:ಕಾಶಿಇ 217 ಪಿಟಿಎಲ್ 2008 ಸಿವಿ1 ದಿನಾಂಕ:20/09/2018ರಂದು ಕೋರಲಾಗಿದ್ದು, ಸರ್ಕಾರದ ಮಾರ್ಗದರ್ಶನ ಸ್ವೀಕೃತವಾಗಿಲ್ಲದ ಕಾರಣ ಕಡತ ಬಾಕಿ ಇರುತ್ತದೆ. |
| 4 | ಆರ್ಥಿಕ ವಿಷಯಗಳಿಗೆ ಸಂಬಂಧಿಸಿದಂತೆ | 2 | 1. **ಕಾಶಿಇ-73-ಜಂ.ಖಾ.ಜಮಾ-ಆಯವ್ಯಯ:2014-15.**<br><br>ಖಾಸಗಿ ಅನುದಾನಿತ ಕಾಲೇಜುಗಳಲ್ಲಿ 2004 ರಿಂದ 2014 ರವರೆಗೆ ವಸೂಲಿ ಮಾಡಿರುವ ಬೋಧನಾ ಮತ್ತು ಪ್ರಯೋಗಾಲಯ ಶುಲ್ಕವನ್ನು ಜಂಟಿ ಖಾತೆಗೆ ಜಮೆ ಮಾಡಬೇಕಾಗಿರುವ ಮೊತ್ತವನ್ನು ಸನ್ಮಾನ್ಯ ಮುಖ್ಯಮಂತ್ರಿಯವರ ಅಧ್ಯಕ್ಷತೆಯಲ್ಲಿ ದಿನಾಂಕ:15-09-2017 ಮತ್ತು 27-09-2017 ರಂದು ನಡೆದ ಸಭೆಯ ನಡವಳಿಯ ಪ್ರಕಾರ ಸರ್ಕಾರಕ್ಕೆ ಜಮೆ ಮಾಡಬೇಕಾಗಿರುವ ಬಾಕಿ ಮೊತ್ತ ವಸೂಲಿ ಮಾಡುವ ಕ್ರಮವನ್ನು ನಿಲ್ಲಿಸಲು ಮಾನ್ಯ ಮುಖ್ಯಮಂತ್ರಿಯವರು ಒಪ್ಪಿಗೆ ನೀಡಿದ್ದು, ಅದರಂತೆ ಸರ್ಕಾರದ ಕಾರ್ಯಕಾರಿ ಆದೇಶವನ್ನು ಹೊರಡಿಸುವಂತೆ ಸರ್ಕಾರವನ್ನು ಕೋರಲಾಗಿದೆ. ಈ ಬಗ್ಗೆ ಸರ್ಕಾರದ ಆದೇಶವಾಗದ ಹಿನ್ನೆಲೆಯಲ್ಲಿ ಕಡತ ಬಾಕಿ ಇರುತ್ತದೆ. |

| | | | | | |
|---|---|---|---|---|---|
| | | | **2. ಕಾಶಿಇ-65-ಯುಜಿಸಿ ಬಾಬಿ -ಆಯವ್ಯಯ:2013-14.**<br>ರಾಜ್ಯದ ಸರ್ಕಾರಿ ಪ್ರಥಮ ದರ್ಜೆ ಹಾಗೂ ಖಾಸಗಿ ಅನುದಾನಿತ ಕಾಲೇಜುಗಳಲ್ಲಿನ ಬೋಧಕ ಸಿಬ್ಬಂದಿಗಳಿಗೆ 01-01-2006ರ ಪರಿಷ್ಕೃತ ಯು.ಜಿ.ಸಿ ಹಿಂಬಾಕಿಯನ್ನು ಸಂಪೂರ್ಣವಾಗಿ ಪಾವತಿಸಿರುವುದಿಲ್ಲ.ಈ ಹಿನ್ನೆಲೆಯಲ್ಲಿ ಸದರಿ ಹಿಂಬಾಕಿಯನ್ನು ಪಾವತಿಸಲು ಸರ್ಕಾರದಿಂದ ಅನುದಾನ ಪಾವತಿಸಿದ ನಂತರ ಕ್ರಮ ವಹಿಸಬೇಕಾಗಿದ್ದು, ತದನಂತರ ಈ ಕಡತವನ್ನು ಇಲಾಖಾ ಹಂತದಲ್ಲಿ ಮುಕ್ತಾಯಗೊಳಿಸಲು ಕ್ರಮ ಕೈಗೊಳ್ಳಲಾಗುವುದು. | | |
| 5 | ತನಿಖಾ ವಿಭಾಗ | 27 | ಕಾಶಿಆ/147/ದೂರು/2007-08/ಸಿವಿ-5/ತವಿ | ಶ್ರೀ ಹೆಚ್.ಕೆ ದ್ಯಾವಪ್ಪ ಸಮಾಜಶಾಸ್ತ್ರ ಉಪನ್ಯಾಸಕರು, ಸರ್ಕಾರಿ ಕಲಾ ಕಾಲೇಜು, ಹಾಸನ ಇವರು ಶ್ರೀ ಚೆನ್ನಯ್ಯ ಎಂಬುವರ ಮೇಲೆ ಕೊಲೆ ಪ್ರಯತ್ನ ಮಾಡಿದ್ದಾರೆ ಎಂಬ ದೂರಿನ ಬಗ್ಗೆ. | ಕ್ರಿಮಿನಲ್ ಪ್ರಕರಣ ಬಾಕಿ ಇರುವುದರಿಂದ ನ್ಯಾಯಾಲಯದ ಆದೇಶ ಕಾಯ್ದಿರಿಸಿ ಕಡತವನ್ನು ವಿಲೇ ಇಡಲಾಗಿದೆ. |
| | | | ಕಾಶಿಇ/06/ತಪಾಸಣೆ/2011-12/ತವಿ ಮತ್ತು ಸರ್ಕಾರದ ಪತ್ರ ಸಂಖ್ಯೆ:ಇಡಿ:512:ಡಿಸಿಇ:2015 | ಲಾಲ್ ಬಹದ್ದೂರು ಶಾಸ್ತ್ರಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಗಂಗಾನಗರ, ಬೆಂಗಳೂರು ಇಲ್ಲಿನ ಆಡಳಿತಾತ್ಮಕ ತಪಾಸಣಾ ವರದಿ (ಶ್ರೀ ನಂದವಾಡಗಿ, ಪ್ರಾಂಶುಪಾಲರು) | ವಿಚಾರಣಾ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಲಾಗಿದ್ದು, ಸರ್ಕಾರದಿಂದ ಅಂತಿಮ ಆದೇಶವಾಗಬೇಕಾಗಿದೆ |
| | | | ಕಾಶಿಆ/01/ಕಾನಿವಪ್ರಷ/2011-12/ತವಿ ಹಾಗೂ ಕಾಶಿಇ/265/ದೂರು/2012-13/ತವಿ | ಡಾ ಈರಣ್ಣ ರಾಜ್ಯಶಾಸ್ತ್ರ ಸಹಾಯಕ ಪ್ರಾಧ್ಯಾಪಕರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಬಂಗಾರಪೇಟೆ ಇವರ ವಿರುದ್ಧದ ದೂರಿನ ಬಗ್ಗೆ. | ವಿಚಾರಣೆ ಪ್ರಗತಿಯಲ್ಲಿದೆ |
| | | | ಕಾಶಿಇ/86/ದೂರು/2011-12/ತವಿ/ಕಾಶಿಇ:39:ದೂರು:2013-14:ತವಿ/ಸರ್ಕಾರಿ ಪತ್ರಸಂಖ್ಯೆ: ಇಡಿ:379:ಡಿಸಿಇ:2011 | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಚಿಕ್ಕಬಳ್ಳಾಪುರ ಇಲ್ಲಿ ಪ್ರಾಂಶುಪಾಲರಾದ ಶ್ರೀ ಬಿ.ವಿ.ಕೃಷ್ಣಪ್ಪ, ರೇಷ್ಮೆ ಕೃಷಿ ಉಪನ್ಯಾಸಕರಾದ ಶ್ರೀ ರಹಮತ್ ಉಲ್ಲಾ ಇವರು ಕೆ.ಪಿ.ಎಸ್.ಸಿ ಪರೀಕ್ಷೆಯಲ್ಲಿ ಅಕ್ರಮ ಎಸಗಿರುತ್ತಾರೆಂಬ ದೂರಿನ ಬಗ್ಗೆ. | ವಿಚಾರಣಾ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಲಾಗಿದ್ದು. ಸರ್ಕಾರದಿಂದ ಅಂತಿಮ ಆದೇಶವಾಗಬೇಕಾಗಿದೆ |

| | | | | | | |
|---|---|---|---|---|---|---|
| | | | ಕಾಶಿಇ/03/ಶಿ.ಕ್ರ/2010-11/ಸಿವಿ-5/ತವಿ / ಸರ್ಕಾರದ ಪತ್ರ ಸಂಖ್ಯೆ: ಇಡಿ:262:ಡಿಸಿಇ:2010 | ಶ್ರೀ ಸ್ಟೀಫನ್ ಕ್ವಾಡ್ರಸ್, ಇತಿಹಾಸ ಸಹಾಯಕ ಪ್ರಾಧ್ಯಾಪಕರು, ಸ.ಪ್ರ.ದ.ಕಾಲೇಜು ಮಂಗಳೂರು ಇವರು 2008 ರ ಅಕ್ಟೋಬರ್/ನವಂಬರ್ ಕಾನೂನು ಪರೀಕ್ಷೆಯಲ್ಲಿ ಕರ್ತವ್ಯಲೋಪ ಎಸಗಿರುವ ಬಗ್ಗೆ. | ಮುಂದುವರೆದ ವಿಚಾರಣೆ ಪ್ರಗತಿಯಲ್ಲಿದೆ | |
| | | | ಕಾಶಿಇ/62/ಕ್ರಿ.ಪ್ರ/2011-12/ತವಿ / ಸರ್ಕಾರದ ಪತ್ರ ಸಂಖ್ಯೆ: ಇಡಿ:36:ಯುಇಸಿ:2010 | ಶ್ರೀ ಎಂ ಆಲೂರಯ್ಯ ಗ್ರಂಥಪಾಲಕರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಸೂಳ್ಯ ಇವರು ಕ್ರಿಮಿನಲ್ ಪ್ರಕರಣದಲ್ಲಿ ಭಾಗಿಯಾಗಿರುವ ಬಗ್ಗೆ. | ವಿಚಾರಣೆ ಪ್ರಗತಿಯಲ್ಲಿದೆ | |
| | | | ಕಾಶಿಇ/203/ದೂರು/2012-13/ತವಿ | ಶ್ರೀ ಎಂ.ಯು ಕುಡಚಿ, ಪ್ರಭಾರ ಪ್ರಾಂಶುಪಾಲರು, ಸ.ಪ್ರ.ದ.ಕಾಲೇಜು ರಬಕವಿಬನಹಟ್ಟಿ | ವಿಚಾರಣೆ ವರದಿಯನ್ವಯ ಕ್ರಮ ಕೈಗೊಳ್ಳಬೇಕಾಗಿದೆ | |
| | | | ಕಾಶಿಇ:105:ವಿವ್ಯಾಅ:201-15:ತವಿ | ಶ್ರೀಮತಿ ಇ.ಎ.ಅಜಿತ, ಮನೋವಿಜ್ಞಾನ ಉಪನ್ಯಾಸಕರು, ಮಹಾರಾಣಿ ವಿಜ್ಞಾನ ಕಾಲೇಜು, ಬೆಂಗಳೂರು | ಗೈರು ಹಾಜರಿ ಸಂಬಂಧ ಶಿಸ್ತು ಕ್ರಮಕ್ಕೆ ಪತ್ರಿಕಾ ಪ್ರಕಟಣೆ ಹೊರಡಿಸಲಾಗಿದೆ | |
| | | | ಕಾಶಿಇ/15/ದೂರು/2012-13/ತವಿ ಸರ್ಕಾರದ ಪತ್ರ ಸಂಖ್ಯೆ: ಇಡಿ:48:ಯುಇಸಿ:2013 | ಶ್ರೀ ಜಿ.ಟಿ.ಹೆಗಡೆ, ಪ್ರಾಂಶುಪಾಲರು ಹಾಗೂ ಶ್ರೀ ಗೌರೀಶ್ ಬಾಡ್ಕರ್, ಅಧೀಕ್ಷಕರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಶಿರಸಿ ಇವರುಗಳ ವಿರುದ್ಧದ ಆಪಾದನೆ ಮೇಲೆ ಶಿಸ್ತು ಕ್ರಮದ ಬಗ್ಗೆ. | ಸರ್ಕಾರದಿಂದ ವಿಚಾರಣಾಧಿಕಾರಿಗಳ ನೇಮಕವಾಗಬೇಕಾಗಿದೆ. | |

| | | | | | | |
|---|---|---|---|---|---|---|
| | | | ಕಾಶಿಇ/164/ದೂರು/2009-10/ಸಿವಿ-5/ತವಿ ಸರ್ಕಾರದ ಪತ್ರ ಸಂಖ್ಯೆ:ಇಡಿ:337:ಡಿಸಿಇ:2014 | ಶ್ರೀ ಅಭಿಷೇಕಂ, ಪ್ರಾಂಶುಪಾಲರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಕುಂದಾಪುರ ಇವರ ವಿರುದ್ಧ ಶ್ರೀ ರಂಜಿತ್ ಕುಮಾರ್ ಶೆಟ್ಟಿ ಇವರು ಸಲ್ಲಿಸಿರುವ ದೂರು. | ವಿಚಾರಣಾ ವರದಿಯನ್ವಯ ಕ್ರಮ ಕೈಗೊಳ್ಳಬೇಕಾಗಿದೆ. | |
| | | | ಕಾಶಿಇ:05:ದೂರು:2012-13:ತವಿ | ಶ್ರೀ ಎಂ.ಬಸವರಾಜು, ನಿವೃತ್ತ ಪ್ರಾಂಶುಪಾಲರು, ಸ.ಪ್ರ.ದ.ಕಾ, ಶ್ರೀರಂಗಪಟ್ಟಣ | ಸರ್ಕಾರದಿಂದ ವಿಚಾರಣಾಧಿಕಾರಿಗಳ ನೇಮಕವಾಗಬೇಕಾಗಿದೆ. | |
| | | | ಕಾಶಿಆ/26/ಉಶಿನ/2008/ ತವಿ ಸರ್ಕಾರದ ಪತ್ರ ಸಂಖ್ಯೆ:ಇಡಿ:88:ಡಿಸಿಇ:2014 | ದಿವಂಗತ: ಬಿ ತಿಮ್ಮಪ್ಪ, ಪ್ರಭಾರ ಪ್ರಾಂಶುಪಾಲರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ನೇಸರ್ಗಿ, ಇವರು ಸರ್ಕಾರಿ ಹಣ ದುರುಪಯೋಗಪಡಿಸಿಕೊಂಡಿರುವ ಬಗ್ಗೆ. | ವಿಚಾರಣೆ ನಡೆಯುತ್ತಿರುವಾಗ ಆಪಾದಿತ ನೌಕರರು ನಿಧನ ಹೊಂದಿರುವುದರಿಂದ ಸದರಿಯವರು ದುರುಪಯೋಗಪಡಿಸಿಕೊಂಡಿರುವ ಸರ್ಕಾರಿ ಹಣವನ್ನು ವಸೂಲು ಮಾಡುವ ಸಂಬಂಧ ಸಿವಿಲ್ ಮೊಕದ್ದಮೆ ಹೂಡಲು ಸರ್ಕಾರವು ಆದೇಶಿಸಿದ್ದು. ವಿಚಾರಣೆ ಪ್ರಗತಿಯಲ್ಲಿದೆ. | |
| | | | ಕಾಶಿಆ/77/ಉಶಿನ/2003/ತವಿ ಸರ್ಕಾರದ ಪತ್ರ ಸಂಖ್ಯೆ:ಇಡಿ:258:ಡಿಸಿಇ:2009 | ದಿವಂಗತ ಎನ್.ಜಿ ಶುಭವಾಣಿ, ಪ್ರಾಂಶುಪಾಲರು (ನಿವೃತ್ತ) ಮಹಾರಾಣಿ ಮಹಿಳಾ ಕಲಾ ಕಾಲೇಜು, ಬೆಂಗಳೂರು ಇವರ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳುವ ಬಗ್ಗೆ. (ಸರ್ಕಾರಿ ಹಣ ದುರುಪಯೋಗ) | ವಿಚಾರಣೆ ನಡೆಯುತ್ತಿರುವಾಗ ಆಪಾದಿತ ನೌಕರರು ನಿಧನ ಹೊಂದಿರುವುದರಿಂದ ವಿಚಾರಣೆಯನ್ನು Abated ಗೊಳಿಸುವ ಬಗ್ಗೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ. | |

| | | | | | | |
|---|---|---|---|---|---|---|
| | | | ಕಾಶಿಇ:121:ದೂರು:2010-11:ತವಿ/ ಸರ್ಕಾರದ ಕಡತ ಸಂಖ್ಯೆ:ಇಡಿ:241:ಡಿಸಿಇ:2016 | ಶ್ರೀ ಎಲ್.ಮುರಳೀಧರ್, ನಿವೃತ್ತ ಪ್ರಾಂಶುಪಾಲರು, ಸ.ಪ್ರ.ದ.ಕಾಲೇಜು, ತೀರ್ಥಹಳ್ಳಿ ಇವರು ಆರ್ಥಿಕ ವ್ಯವಹಾರಗಳಲ್ಲಿ ನಿಯಮಗಳನ್ನು ಉಲ್ಲಂಘಿಸಿರುವ ಬಗ್ಗೆ | ಸರ್ಕಾರದಿಂದ ದೋಷಾರೋಪಣಾ ಪಟ್ಟಿ ಜಾರಿಗೊಳಿಸಬೇಕಾಗಿದ್ದು, ವಿಚಾರಣಾಧಿಕಾರಿಗಳ ನೇಮಕವಾಗಬೇಕಾಗಿದೆ. | |
| | | | ಕಾಶಿಇ:14:ದೂರು:2012-13/ತವಿ ಸರ್ಕಾರದ ಪತ್ರ ಸಂಖ್ಯೆ:ಇಡಿ:113:ಡಿಸಿಇ:2018 | ಶ್ರೀ ಎಂ.ಕೆ. ನಾಯಕ, ಪ್ರಭಾರ ನಿರ್ದೇಶಕರು ಹಾಗೂ ಗ್ರೇಡ್-2 ಪ್ರಾಂಶುಪಾಲರು, ಮಹಾರಾಣಿ ಕಲಾ, ವಾಣಿಜ್ಯ ಮತ್ತು ನಿರ್ವಹಣಾ ಕಾಲೇಜು, ಬೆಂಗಳೂರು ಇವರ ವಿರುದ್ಧ ಶಿಸ್ತುಕ್ರಮದ ಬಗ್ಗೆ | ಸರ್ಕಾರದಿಂದ ವಿಚಾರಣಾಧಿಕಾರಿಗಳ ನೇಮಕವಾಗಬೇಕಾಗಿದೆ. | |
| | | | ಕಾಶಿಇ:211:ನಿಖಅ:2012-13:ಸೇವಿ-2:ತವಿ | ಶ್ರೀಮತಿ ನಯನ.ಎಲ್.ಎಂ., ಸಹಾಯಕ ಪ್ರಾಧ್ಯಾಪಕರು, ಸರ್ಕಾರಿ ಮಹಿಳಾ ಕಾಲೇಜು, ಬಲ್ಮಠ ಇವರಿಗೆ ನಿವೇಶನ ಖರೀದಿಗೆ ಅನುಮತಿ ನೀಡುವ ಬಗ್ಗೆ | ಸಮಜಾಯಿಷಿಯನ್ನು ಸರ್ಕಾರಕ್ಕೆ ಸಲ್ಲಿಸಲು ಕಡತ ಚಾಲನೆಯಲ್ಲಿದೆ | |
| | | | ಕಾಶಿಇ/05(ಎ)/ಶಿ.ಕ್ರ/2012-13/ತವಿ | ಶ್ರೀ ಮಹದೇವ್., ದ್ವಿ.ದ.ಸ ಸರ್ ಎಂ. ವಿ ವಿಜ್ಞಾನ ಕಾಲೇಜು, ಭದ್ರಾವತಿ, ಇವರು ಕ್ರಿಮಿನಲ್ ಪ್ರಕರಣದಲ್ಲಿ ಭಾಗಿಯಾಗಿರುವ ಆಧಾರದಲ್ಲಿ ಶಿಸ್ತು ಕ್ರಮದ ಬಗ್ಗೆ. | ವಿಚಾರಣಾ ವರದಿ ಸಲ್ಲಿಕೆಯಾಗಿದ್ದು, ಕ್ರಮ ಕೈಗೊಳ್ಳಬೇಕಾಗಿದೆ | |
| | | | ಕಾಶಿಆ/112/ಉಶಿನ/2007/ತವಿ | ಶ್ರೀ ಎಂ ಮಹದೇವಯ್ಯ, ದ್ವಿ.ದ.ಸ ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹೆಚ್.ಡಿ.ಕೋಟೆ ಇವರು ಹಣ ದುರುಪಯೋಗಪಡಿಸಿಕೊಂಡಿರುವ ಆಪಾದನೆಯ ಮೇಲೆ ಶಿಸ್ತು ಕ್ರಮದ ಬಗ್ಗೆ. | ಇವರು ಈ ಹಿಂದೆ ಸಮಾಜಕಲ್ಯಾಣ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸಿದ್ದು ಅಲ್ಲಿ ವಿಚಾರಣೆ ನಡೆಸಲಾಗುತ್ತಿದೆ | |

| | | | | | | |
|---|---|---|---|---|---|---|
| | | | ಕಾಶಿಇ/64/ಲೆಪತ/2006/ಸಿವಿ-5/ತವಿ | ಶ್ರೀ ಕೆ.ಎಲ್.ರಾಜಶೇಖರ್, ಮ್ಯಾನೇಜರ್, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಬಂಗಾರಪೇಟೆ ಇವರ ವಿರುದ್ಧ ದೂರಿನ ಬಗ್ಗೆ. | ವಿಚಾರಣಾ ವರದಿಯನ್ವಯ ಕ್ರಮ ಕೈಗೊಳ್ಳಬೇಕಾಗಿದೆ | |
| | | | ಕಾಶಿಇ:222:ದೂರು:2012-13:ತವಿ | ಶ್ರೀ ಡಿ.ಜಯಣ್ಣಗೌಡ, ಕನ್ನಡ ಉಪನ್ಯಾಸಕರು, ಸಪ್ರದಕಾ, ಬೇಲೂರು ಇವರ ಎಂ.ಫಿಲ್ ಅಂಕಪಟ್ಟಿ ದೃಢೀಕರಣದ ಬಗ್ಗೆ | ಸದರಿಯವರು ನಕಲಿ ಎಂಫಿಲ್ ಪ್ರಮಾಣ ಪತ್ರ ಸಲ್ಲಿಸಿ ಸೇವಕಾತಿ ಹೊಂದಿರುವ ದೂರಿಗೆಗೆ ಸಂಬಂಧಿಸಿದಂತೆ ಈ ಕಛೇರಿ ಹಂತದಲ್ಲಿ ಪರಿಶೀಲನೆ ಹಂತದಲ್ಲಿದೆ | |
| | | | ಕಾಶಿಇ:16:ಮನವಿ:2011-12:ತವಿ | ಸಪ್ರದಕಾ, ಬನ್ನೂರು ಇಲ್ಲಿ ಗ್ರಂಥಾಲಯ ಪುಸ್ತಕಗಳು ಕಾಣೆಯಾಗಿರುವ ಬಗ್ಗೆ | ಸದರಿ ಕಾಲೇಜಿನಲ್ಲಿ ರೂ 64.834/- ಮೌಲ್ಯದ ಪುಸ್ತಕಗಳು ಕಾಣೆಯಾಗಿರುವುದಕ್ಕೆ ಸಂಬಂಧ ಪಟ್ಟ ಪ್ರಾಂಶುಪಾಲರಿಗೆ ಕಾರಣ ಕೇಳುವ ನೋಟೀಸ್ ಜಾರಿ ಮಾಡಲಾಗಿರುತ್ತದೆ. | |
| | | | ಕಾಶಿಇ:07:ದುರಂತ:2012-13:ತವಿ | ಸಪ್ರದಕಾ, ಗದಗ ಇಲ್ಲಿ ಬೆಂಕಿ ದುರಂತ ಬಗ್ಗೆ | ಸದರಿ ಕಾಲೇಜಿನಲ್ಲಿ ಬೆಂಕಿ ದುರಂತದಿಂದ ಪ್ರಯೋಗಾಲಯ ಉಪಕರಣಗಳು ನಾಶವಾಗಿರುವ ಪ್ರಕರಣಕ್ಕೆ ಸಂಬಂಧಿಸಿದಂತೆ ವಸುನಿಷ್ಟವರದಿ ನೀಡಲು ಜಂಟಿ ನಿರ್ದೇಶಕರಿಗೆ ಪಪ್ರ ಬರೆಯಲಾಗಿದೆ. | |
| | | | ಕಾಶಿಇ:130:ದುರಂತ:2000-01:ತವಿ | ಹೊನ್ನಾವರ ಎಸ್ ಡಿ ಎಂ ಕಾಲೇಜು, ಶ್ರೀ ಕಟ್ಟಿಮನಿ ಇವರು ಸುಳ್ಳ ಜಾತಿ ಪ್ರಮಾಣ ಪತ್ರ ನೀಡಿರುವ ಬಗ್ಗೆ | ಆರೋಪಿತರು ನಕಲಿ ಜಾತಿ ಪ್ರಮಾಣ ಪತ್ರ ಸಲ್ಲಿಸಿ ಸೇವೆಗೆ ಸೇರಿರುವುದರಿಮದ ಆಡಳಿತ ಮಂಡಳಿ ಸೇವೆಯಿಂದ ವಜಾ ಮಾಡಿದ್ದು ಸದರಿಯವರು ಪಡೆದಿರುವ ವೇತನ ಬತ್ಯೆಗಳನ್ನು ವಸೂಲಿ ಮಾಡಿ ವರದಿ ಸಲ್ಲಿಸಲು ಜಂಟಿ ನಿರ್ದೇಶಕರಿಗೆ ಪತ್ರ ಬರೆಯಲಾಗಿದೆ. | |

| | | | | | | |
|---|---|---|---|---|---|---|
| | | | ಕಾಶಿಇ:98:ಶಿಸ್ತು ಕ್ರಮ:2011-12:ತವಿ | ಶ್ರೀ ಕೆ ಎಸ್ ವೆಂಕಟೇಶ ಪ್ರಭಾರ ಪ್ರಾಂಶುಪಾಲರು ಮೈಸೂರು ಎಜುಕೇಷನ್ ಸೊಸೈಟಿ ಬೆಂಗಳೂರು ಇವರ ವಿರುದ್ಧ ಶಿಸ್ತು ಕ್ರಮ ಬಗ್ಗೆ | ಆರೋಪಿತರ ವಿರುದ್ಧ ಎಂ ಇ ಎಸ್ ಆಡಳಿತ ಮಂಡಳಿ ಶಿಸ್ತು ಕ್ರಮ/ವಿಚಾರಣೆ ನಡೆಸಿ ವರದಿ ಸಲ್ಲಿಸಲು ವಿಳಂಬ ಮಾಡುತ್ತಿರುವುದರಿಮದ ಆಡಳಿತ ಮಂಡಳಿ ವಿರುದ್ಧ ಕ್ರಮಕ್ಕೆ ಸರ್ಕಾರಕ್ಕೆ ಪ್ರಸ್ತಾಪಿಸಲಾಗಿದೆ | |
| | | | ಕಾಶಿಇ:183:ಎಲ್ ಎ ಎಲ್ ಸಿ:2010-11:ತವಿ | ಶ್ರೀ ಶರಣ ಬಸವೇಶ್ವರ ವಿದ್ಯಾಸಂಸ್ಥೆ ಕಲಬುರಗಿ ಅಧ್ಯಕ್ಷರಿ ಸಿಬಂಧ್ಧಿಗೆ ಕಿರುಕುಳ ನೀಡುತ್ತಿರುವ ಬಗ್ಗೆ | ಶ್ರೀ ಶರಣ ಬಸವೇಶ್ವರ ವಿದ್ಯಾಸಂಸ್ಥೆಯ ಆಡಳಿತ ಮಂಡಳಿ ವಿರುದ್ಧಧದ ದೂರಿನ ಬಗ್ಗೆ ಆಡಳಿತ ಮಂಡಳಿ ಆರೋಪಗಳನ್ನು ನಿರಾಕರಿಸಿರುವುದರಿಂದ ಮತ್ತೊಮ್ಮೆ ಪರಿಶೀಲಿಸಿ ವರದಿ ನೀಡಲು ಜಂಟಿ ನಿರ್ದೇಶಕರಿಗೆ ಪತ್ರ ಬರೆಯಲಾಗಿದೆ. | |
| | | | ಕಾಶಿಇ:114:ದೂರು:2008-09:ತವಿ | ಶ್ರೀ ರಾಘವೇಂದ್ರಚಾರಿ ಹೆಚ್ ಆರ್ ಸಪ್ರದಕಾ.ಕೊಪ್ಪಳ ಇವರ ವಿರುದ್ಧ ದೂರಿನ ಬಗ್ಗೆ | ಲೆಕ್ಕ ತಪಾಸಣೆ ವರದಿಯ ಮೇಲೆ ಸದರಿಯವರ ವಿರುದ್ಧ ಶಿಸ್ತಿ ಕ್ರಮ ಜರುಗಿಸಲು ಅಂತಿಮ ನೋಟೀಸ್ ಜಾರಿ ಮಾಡಲಾಗಿದೆ | |
| | | | ಕಾಶಿಇ:16:ಕಾಲೋ:2012-13:ತವಿ | ಶ್ರೀ ಶಿವಪುತ್ರಪ್ಪ ಶ್ರೀ ಶರಣ ಬಸವೇಶ್ವರ ವಿದ್ಯಾಸಂಸ್ಥೆ ಕಲಬುರಗಿ ಇವರ ವಿರುದ್ಧ ದೂರಿನ ಬಗ್ಗೆ | ಇವರನ್ನು ಆಡಳಿತ ಮಂಡಳಿ ಸೇವೆ ಇಂದ ವಜಾ ಮಾಡಿರುವುದನ್ನು ನ್ಯಾಯಾಲಯದ ಆದೇಶದಂತೆ ಸಕ್ಷಮ ಪ್ರಾಧಿಕಾರದ ಮುಂದೆ ಪ್ರಶ್ನಿಸುವಂತೆ ಅರ್ಜಿದಾರರಿಗೆ ಸೂಚಿಸಲು ಜಂಟಿ ನಿರ್ದೇಶಕರಿಗೆ ಪತ್ರ ಬರೆಯಲಾಗಿದೆ. | |
| | ಒಟ್ಟು | 172 | | | | |

11/12/18

ಕಾಲೇಜು ಶಿಕ್ಷಣ ಹೆಚ್ಚುವರಿ ನಿರ್ದೇಶಕರು